ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು. ಅಲ್ಲದೆ ಪ್ರಮುಖ ಸುದ್ದಿವಾಹಿನಿಗಳ ಚರ್ಚೆಗಳಲ್ಲಿ ಪಾಲ್ಗೊಂಡು ನೋಟು ಅಪಮೌಲ್ಯೀಕರಣವನ್ನು ಬಹಳವಾಗಿ ಸಮರ್ಥಿಸಿಕೊಂಡಿದ್ದೆ. ಹೇಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಎಲ್ಲಾ ಸರ್ಕಾರಗಳು ಈ ದೇಶದ ರೂಟ್ ಲೆವೆಲ್ ಎಕಾನಮಿಯನ್ನು ಕಡೆಗಣಿಸಿದವೆಂಬುದನ್ನು ಅಂಕಿ ಅಂಶಗಳ ಸಮೇತ ಬಿಚ್ಚಿಟ್ಟಿದ್ದೆ. ಈ ಎಲ್ಲಾ ವಿದ್ಯಮಾನಗಳು ನನ್ನನ್ನು ಗುರುತಿಸಿಕೊಳ್ಳುವಂತೆ ಮಾಡಿದ್ದವು. ಅಂದು ನನ್ನ ಮುಂದೆ ಕುಳಿತಿದ್ದ ರಾಘವ ಪಂತುಲುವಿನ ಮುಖದಲ್ಲಿ ಅತ್ಯಂತ ನಿರ್ಲಿಪ್ತ ಭಾವ ಪ್ರಕಟವಾಗುತ್ತಿತ್ತು. ಭಾವ ತೀವ್ರತೆಯ ಯಾವ ಏರುಪೇರು ಇಲ್ಲದೆ ಆತ ಮಾತನಾಡತೊಡಗಿದ್ದ: 'ನೀನು ಆ ದಿನ ಹಾಸ್ಟೆಲ್ ರೂಮಿನಿಂದ ನನ್ನನ್ನು ತಿರಸ್ಕರಿಸಿ ಹೋಗದಿದ್ದಿದ್ದರೆ ನಾನು ಡ್ರಿಂಕ್ಸ್, ಸಿಗರೇಟ್, ಕಾರ್ಡ್ಸ್, ಯಾವುದನ್ನು ಬಿಡುತ್ತಿರಲಿಲ್ಲ. ನಿನ್ನ ಅಂದಿನ ನಿರಾಕರಣೆಯ ಮಾರ್ಗ ನನ್ನ ಅಂತರಂಗದಲ್ಲಿ ಕೋಲಾಹಲವನ್ನು ಎಬ್ಬಿಸಿಬಿಟ್ಟಿತಲ್ಲದೆ ಎಚ್ಚರಿಕೆಯ ಗಂಟೆಯನ್ನೂ ಬಾರಿಸಿತ್ತು. ಅವೊತ್ತಿನಿಂದ ಇವೊತ್ತಿನವರೆಗೂ ಡ್ರಿಂಕ್ಸ್, ಸಿಗರೇಟ್, ಕಾರ್ಡ್ಸ್ ಯಾವುದನ್ನೂ ಮುಟ್ಟಲಿಲ್ಲ. ಅವುಗಳ ನಿರಾಕರಣೆಯಿಂದ ಆರೋಗ್ಯ, ಸಂಪತ್ತು, ಖ್ಯಾತಿ, ಗುರುತು, ಪ್ರೀತಿ, ನಂಬಿಕೆ ಎಲ್ಲವನ್ನೂ ಅಗಾಧವಾಗಿ ಪಡೆಯುತ್ತಾ ಹೋದೆ. ಅಪ್ಪನ ಎಲ್ಲಾ ವ್ಯಾಪಾರ ವಹಿವಾಟುಗಳಲ್ಲೂ ನನ್ನ ಛಾಪು ದಟ್ಟವಾಗಿ ಮೂಡತೊಡಗಿತ್ತು. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ತುಂಬಾ ಬಿಜಿಯಾಗಿಬಿಟ್ಟೆ. ಇದಕ್ಕೆಲ್ಲ ಮೂಲ ಅಂದಿನ ನಿನ್ನ ಮೌನ ನಿರಾಕರಣೆ. ಸರ್ಕಾರ **demonetisation** ಘೋಷಣೆ ಮಾಡಿದ ದಿನ ಮಧ್ಯರಾತ್ರಿಯೇ ಹೃದಯಾಘಾತಕ್ಕೊಳಗಾಗಿ ಅಸು ನೀಗಿಬಿಟ್ಟರು ನಮ್ಮಪ್ಪ. ನಮ್ಮಪ್ಪನಿಗೆ ಹಣದ ವ್ಯಾಮೋಹ ಅಗಾಧವಾಗಿತ್ತು. ಮನುಷ್ಯನಿಗೆ ಎಲ್ಲಾ ವ್ಯಾಮೋಹಕ್ಕಿಂತಲೂ ಹಣದ ವ್ಯಾಮೋಹ ವಿಪರೀತವಾಗಿರುತ್ತದೆಂದು ಅರ್ಥಶಾಸ್ತ್ರ ಅಧ್ಯಯನ ಮಾಡಿದ ನಿನಗೆ ಹೇಳಬೇಕಾಗಿಲ್ಲ. ಬಹುಶಃ **diminishing marginal utility** ಸಿದ್ಧಾಂತ ಅನ್ವಯ ಆಗದೆ ಇರುವುದು ಹಣದ ವಿಷಯದಲ್ಲಿ ಮಾತ್ರವೇ ಇರಬೇಕು. ತಾನು ವಾಮಮಾರ್ಗಗಳಿಂದ ಕೂಡಿಟ್ಟಿದ್ದ ಕೋಟಿಗಟ್ಟಲೆ ಹಣ ಕ್ಷಣ ಮಾತ್ರದಲ್ಲಿ ಕೆಲಸಕ್ಕೆ ಬಾರದ **dust** ಆಗಿ ರೂಪಾಂತರಗೊಂಡ ಸತ್ಯವನ್ನು ಅಪ್ಪನಿಗೆ ಅರಗಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಅವೊತ್ತು ವಿಪರೀತವಾಗಿ ನನಗೆ ನೆನಪಾಗಿದ್ದು ನೀನು ಮತ್ತು ನಿನ್ನ ನಿರಾಕರಣೆ. ಆ ಮಾರನೆಯ ದಿನ ಅಪ್ಪನ ಹೆಣ ಸಂಸ್ಕಾರವಾಗುವುದರ ಜೊತೆಗೇ ಅಪ್ಪನ ಲೆಕ್ಕವಿಲ್ಲದ ಕೋಟಿ ಕೋಟಿ ಹಣವನ್ನು ಜಿಲ್ಲೆಯ ಬಡವರಿಗೆ ಮನಬಂದಂತೆ ಹಂಚಿಬಿಟ್ಟಿದ್ದೆ. ಹಾಗೆ ಮಾಡುವುದು ಅಪ್ಪನ ಅಭಿಲಾಷೆಯಾಗಿತ್ತು ಎಂಬ ಸುಳ್ಳು ಸುದ್ದಿಯನ್ನು ಸುದ್ದಿ ಮಾಧ್ಯಮಗಳ ಮೂಲಕ ಹರಿಯಬಿಡಿಸಿದ್ದೆ. ಜಿಲ್ಲೆಯ ಎಲ್ಲಾ ವರ್ಗದ ಜನ ಅಪ್ಪನೊಂದಿಗೆ ನನ್ನನ್ನೂ ಆರಾಧಿಸುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ನಾನು ಪರವಹಿಸಿದವರೇ ಗೆಲ್ಲುತ್ತಾರೆ...' ರಾಘವ ಪಂತುಲು ನನ್ನ ಕಣ್ಣುನೆಟ್ಟು ತುಟಿಯ ಮೇಲೆ ನಗುತೇಲಿಸಿದ್ದ.

'ಆತ್ಮವಿಶ್ವಾಸ...' ಎಂದಷ್ಟೆ ಹೇಳಿ ಕಿರಿದಾಗಿ ನಕ್ಕಿದ್ದೆ. ರಾಘವ ಪಂತುಲು ಆ ಕ್ಷಣ ನನಗೆ ಚಾಣಕ್ಯನಂತೆ ಭಾಸವಾಗತೊಡಗಿದ್ದ.

'ನೀನು ನಿಜವಾಗಿಯೂ ಚಾಣಕ್ಯ...' ನಾನು ಹೇಳಿಯೂಬಿಟ್ಟಿದ್ದೆ ಅಷ್ಟೆ. ಆ ತಿಂಗಳಲ್ಲಿಯೇ ನಾನು ಕೆಲಸಕ್ಕೆ ರಾಜೀನಾಮೆ ನೀಡಿದ್ದೆ. ನನ್ನ ಎಲ್ಲಾ ಅಗತ್ಯಗಳನ್ನೂ ರಾಘವ ಪಂತುಲೇ ಪೂರೈಸುತ್ತಿದ್ದಾನೆ. ಆತನ ಅನೇಕ ವ್ಯವಹಾರಗಳಲ್ಲಿ, ತೀರ್ಮಾನಗಳಲ್ಲಿ ನನ್ನ ಮಾತುಗಳೇ ಅಂತಿಮ. ನಾನು ಜೊತೆಯಾದ ಮೇಲೆ ಪಂತುಲು ಇನ್ನಷ್ಟು ಚೈತನ್ಯದಿಂದ